MVC : 179/2022
PW: 1

(ಇಂದು ದಿನಾಂಕಃ 06-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲುಃ 4 ನೇ ಎದುರುದಾರರ ಪರ ಶ್ರೀ ವಿ.ಆರ್.ಎಮ್. ವಕೀಲರಿಂದಃ**

ನನಗೆ ಇಬ್ಬರು ಗಂಡು ಮಕ್ಕಳು, ಅವರ ಪೈಕಿ ಮೃತ ಉಮೇಶ ರಸ್ತೆ ಅಪಘಾತದಲ್ಲಿ ತೀರಿ ಹೋಗಿದ್ದಾರೆ. ನನ್ನಹಿರಿಯ ಮಗ ರಮೇಶ. 1 ನೇ ಎದುರುದಾರಳು ರಮೇಶನ ಹೆಂಡತಿ ಎಂದರೆ ಸರಿಯಲ್ಲ. 2 ಮತ್ತು 3 ನೇ ಎದುರುದಾರರು ಉಮೇಶನ ಮಕ್ಕಳು. 2 ಮತ್ತು 3 ನೇ ಎದುರುದಾರರು ಉಮೇಶನ ಮಕ್ಕಳು ಎಂದು ತೋರಿಸಲು ಶಾಲಾ ದಾಖಲಾತಿ ಹಾಜರು ಪಡಿಸಿಲ್ಲ. 4 ನೇ ಎದುರುದಾರಳು ಮೃತ ಉಮೇಶನ ಹೆಂಡತಿ ಅಥವಾ ಅಲ್ಲ ನನಗೆ ಗೊತ್ತಿಲ್ಲ. ಸಾಕ್ಷಿಗೆ 4 ಪೋಟೋಗಳನ್ನು ತೋರಿಸಲಾಗಿ ಅದರಲ್ಲಿ ಉಮೇಶ, 4 ನೇ ಎದುರುದಾರಳು ಮತ್ತು ನಾನು ಇದ್ದೇವೆ ಎಂದರೆ ಸರಿ. ಸದರಿ ಪೋಟೋಗಳನ್ನು ನಿ.ಆರ್-7 ರಿಂದ 11 ಎಂದು ಗುರುತಿಸಲಾಯಿತು. ನಿ.ಪಿ-11 ರ ಕಾಲಂ ನಂಬರ 6 ರಲ್ಲಿ 1 ನೇ ಎದುರುದಾರಳನ್ನು ಮಗಳು ಎಂದು ತೋರಿಸಲಾಗಿದೆ ಎಂದರೆ ಸರಿಯಲ್ಲ. 1 ರಿಂದ 3 ನೇ ಎದರುದಾರರು ರಮೇಶನ ಹೆಂಡತಿ ಮಕ್ಕಳು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ರಮೇಶನ ಹೆಂಡತಿ ಹೆಸರು ವಿಜೇತ ಎಂದು ಇದೆ ಎಂದು ಹೇಳುತ್ತಾರೆ. ಸವಿತಾನ ವಯಸ್ಸು 22 ಅಲ್ಲ 30 ಕ್ಕಿಂತ ಹೆಚ್ಚಾಗಿದೆ ಎಂದರೆ ಸರಿಯಲ್ಲ. 4 ನೇ ಎದುರುದಾರಳು ಒಬ್ಬಳೇ ಮೃತ ಉಮೇಶನ ಹೆಂಡತಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಸವಿತಾ ಉಮೇಶನ ಮೊದಲನೆ ಹೆಂಡತಿ ಮತ್ತು 4 ನೇ ಎದುರುದಾರಳು ಉಮೇಶನ 2 ನೇ ಹೆಂಡತಿ ಎಂದು ಹೇಳುತ್ತಾರೆ. 7 ನೇ ಪ್ರತಿವಾದಿ ಉಮೇಶನ ಮಗ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿ ನಮ್ಮ ಮನೆಯಲ್ಲಿ 15 ದಿನ ಕೂಡ ವಾಸವಿರಲಿಲ್ಲ. ಶವ ತನಿಖೆಯಲ್ಲಿ ಹೆಂಡತಿ ಹೆಸರು ಪಾರ್ವತಿ ಎಂದು ಉಲ್ಲೇಖ ಮಾಡಿದ್ದಾರೆ ಎಂದರೆ ಸರಿಯಲ್ಲ. ಮಧುವಂತಶಂಕರ ನಾಯಕ ಮತ್ತು ರವಿ ರಾಠೋಡ ಶವ ತನಿಖೆಯ ಸಾಕ್ಷಿದಾರರು

ಎಂದರೆ ಇರಬಹುದು. ರವಿ ರಾಠೋಡ ಪೋಲಕಪಳ್ಳಿ ತಾಂಡದವರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾಖಲಾತಿಯಲ್ಲಿ ಸವಿತಾ ಉಮೇಶನ ಹೆಂಡತಿ ಎಂದು ಉಲ್ಲೇಖ ಇಲ್ಲ ಎಂದರೆ ಸರಿಯಲ್ಲ. ಪೋಲೀಸ ದಾಖಲಾತಿಗಳಲ್ಲಿ ಸವಿತಾ ಉಮೇಶನ ಹೆಂಡತಿ ಎಂದು ಉಲ್ಲೇಖ ಆಗಿಲ್ಲ ಎಂದರೆ ಸರಿಯಲ್ಲ. ನಾನು ಪೋಲೀಸರಿಗೆ ಹೇಳಿಕೆ ನೀಡಿದ್ದೇನೆ. ಸವಿತಾ ಉಮೇಶನ ಮೊದಲನೆ ಹೆಂಡತಿ ಎಂದು ಉಲ್ಲೇಖ ಮಾಡಿರುವ ದಾಖಲಾತಿಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಸವಿತಾ ಉಮೇಶನ ಹೆಂಡತಿ ಅಲ್ಲ ಎಂದರೆ ಸರಿಯಲ್ಲ. 4 ನೇ ಎದುರುದಾರಳು ಒಬ್ಬಳೆ ಉಮೇಶನ ಹೆಂಡತಿ ಎಂದರೆ ಸರಿಯಲ್ಲ.

ಅಪಘಾತ ಆದಾಗ ಉಮೇಶನಿಗೆ ಎಷ್ಟು ವಯಸ್ಸಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸವಿತಾ ಉಮೇಶನ ಮೊದಲ ಹೆಂಡತಿ ಎಂದು ತೋರಿಸಲು ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಇದೇ ಅಪಘಾತ ಸಂಬಂಧ ಮಹೆಬೂಬ ನಗರದಲ್ಲಿ 4 ನೇ ಎದುರುದಾರಳು MVC No.62/2022 ಸಲ್ಲಿಸಿದ್ದಾರೆ ಎಂದರೆ ಸರಿ. ಅದರಲ್ಲಿ ನಾನು ಅರ್ಜಿ ಸಲ್ಲಿಸಿ 4 ಮತ್ತು 5 ನೇ ಎದುರುದಾರಳಾಗಿ ಸೇರಿಕೊಂಡಿದ್ದೇವೆ ಎಂದರೆ ಸರಿ. ಅದರಲ್ಲಿ ನಾವು ತಕರಾರು ಸಲ್ಲಿಸಿದ್ದೇವೆ ಎಂದರೆ ಸರಿ.

**ಮರು ವಿಚಾರಣೆ ಇಲ್ಲ:.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.